**ದಿ:05.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಆರ್ ಜೆ ವಕೀಲರಿಂದಃ**

1. ವಾದಿ ಮತ್ತು ಪ್ರತಿವಾದಿ 1 ರಿಂದ 8 ಮತ್ತು ನಾನು ಮುಕ್ಕಾಟಿ ಕುಟುಂಬದವರು ಎಂದರೆ ಸರಿ. ವಾದಿ ನನ್ನ ಭಾವ ಎಂದರೆ ಸರಿ. ಮುದ್ದಯ್ಯ ಎಂಬುವವರು ನನ್ನ ಮಾವ ಎಂದರೆ ಸರಿ, ಸದರಿಯವರಿಗೆ 4 ಜನ ಮಕ್ಕಳು. ಮುದ್ದಯ್ಯರವರ ಹಿರಿಯ ಮಗನಾದ ಎಂ ಎಂ ಅಪ್ಪಯ್ಯರವರು ಮದುವೆಯಾಗದೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ಅತ್ತೆಯಾದ ಸೀತಮ್ಮರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಮ್ ನಂ.1 ರಿಂದ 24 ಸ್ವತ್ತುಗಳು ನನ್ನ ಮಾವನಾದ ಎಂ ಟಿ ಮುದ್ದಯ್ಯರವರಿಗೆ ಸೇರಿದ ಆಸ್ತಿ ಎಂದರೆ ಸರಿ. ನನ್ನ ಮಾವ ತಮ್ಮ ಜೀವಿತ ಕಾಲದಲ್ಲಿ ದಾವಾ ಷೆಡ್ಯೂಲ್ ಐಟಮ್ ನಂ.1 ರಿಂದ 24 ಸ್ವತ್ತುಗಳನ್ನು ಅವರೆ ಕೃಷಿ ಮಾಡುತ್ತಿದ್ದರು ಎಂದರೆ ಸರಿ.

2. ಮುದ್ದಯ್ಯರವರು 1972 ರಲ್ಲಿ ಮೃತಪಟ್ಟಿರುತ್ತಾರೆ. ಸದರಿಯವರು ಮೃತಪಟ್ಟ

ನಂತರದಲ್ಲಿ ಅವರ ಅನುಭವದಲ್ಲಿದ್ದಂತಹ ದಾವಾ ಷೆಡ್ಯೂಲ್ ಐಟಮ್ ನಂ.1 ರಿಂದ 24 ಸ್ವತ್ತುಗಳು ಅವರ 4 ಮಕ್ಕಳ ಜಂಟಿ ಸ್ವಾಧೀನಕ್ಕೆ ಬಂದಿರುತ್ತದೆ ಎಂದರೆ ಸರಿ. ಎಂ ಎಂ ಅಪ್ಪಯ್ಯರವರು ಯಾವಾಗ ಮೃತಪಟ್ಟಿರುತ್ತಾರೆ ಎಂದು ಹೇಳಲು ಈಗ ನೆನಪಿಲ್ಲ. ನನ್ನ ಗಂಡನಾದ ಪ್ರತಿವಾದಿ 8 ರವರು ದಿ:09.06.2015 ರಂದು ಮೃತಪಟ್ಟಿರುತ್ತಾರೆ. ಎಂ ಎಂ ಅಪ್ಪಯ್ಯರವರು ಮೃತಪಟ್ಟ ನಂತರ ಎಂ ಎಂ ಸೋಮಣ್ಣ, ಎಂ ಎಂ ಅಯ್ಯಪ್ಪ ಮತ್ತು ವಾದಿಯವರ ಜಂಟಿ ಸ್ವಾಧೀನದಲ್ಲಿ ದಾವಾ ಷೆಡ್ಯೂಲ್ ಐಟಮ್ ನಂ.1 ರಿಂದ 24 ಸ್ವತ್ತುಗಳು ಬಂದಿರುತ್ತದೆ ಎಂದರೆ ಸರಿ. ಸೋಮಣ್ಣರವರು ಈಗ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸೋಮಣ್ಣರವರು ಮೃತಪಟ್ಟ ನಂತರದಲ್ಲಿ ಸೋಮಣ್ಣರವರ ವಾರಸುದಾರರು ಮತ್ತು ನನ್ನ ಗಂಡನಾದ 8ನೇ ಪ್ರತಿವಾದಿ ಮೃತಪಟ್ಟ ನಂತರದಲ್ಲಿ ನಾನು ಮತ್ತು ವಾದಿ ದಾವಾ ಷೆಡ್ಯೂಲ್ ಐಟಮ್ ನಂ.1 ರಿಂದ 24 ಸ್ವತ್ತುಗಳ ಜಂಟಿ ಸ್ವಾಧೀನ ಹೊಂದಿರುತ್ತೇವೆ ಎಂದರೆ ಸರಿ. ನನಗೆ ಮಕ್ಕಳು ಇರುವುದಿಲ್ಲ.

3. ಮುದ್ದಯ್ಯರವರಿಂದ ಬಂದಂತಹ ಆಸ್ತಿಯನ್ನು ಸೋಮಣ್ಣರವರ ವಾರಸುದಾರರು, ನಾನು ಮತ್ತು ವಾದಿಯವರು ಸ್ವಲ್ಪ ಸ್ವಲ್ಪ ಜಾಗದಲ್ಲಿ ಕೃಷಿ ಮಾಡಿಕೊಂಡು ಅನುಭವಿಸುತ್ತಿದ್ದೇವೆ ಎಂದರೆ ಸರಿ. ಮುದ್ದಯ್ಯರವರಿಗೆ ಸೇರಿದ ದಾವಾ ಷೆಡ್ಯೂಲ್ ಐಟಮ್ ನಂ.1 ರಿಂದ 24 ಸ್ವತ್ತುಗಳನ್ನು ಸರ್ವೆಯರ್ ಮುಖಾಂತರ ಸಮ ಪಾಲು ಮಾಡಿ ವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಸದರಿ ಸ್ವತ್ತುಗಳು ಸಮ ಪಾಲಾಗಿ ವಿಭಾಗ ಮಾಡಿಕೊಂಡಿರುವ ಬಗ್ಗೆ ಬರವಣಿಗೆ ಆಗಿರುವುದಿಲ್ಲ ಎಂದರೆ ಸರಿ.

4. ನನ್ನ ಲಿಖಿತ ಹೇಳಿಕೆಯಲ್ಲಿ ಮತ್ತು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಆಸ್ತಿಗಳ ಸಂಪೂರ್ಣ ಮಾಹಿತಿ ನನಗೆ ಇರುವುದಿಲ್ಲ, ಆದರೆ ನಮ್ಮ ಪಾಲಿಗೆ ವಿಭಾಗದ ಮುಖಾಂತಹ ಬಂದಂತಹ ಆಸ್ತಿಗಳ ಬಗ್ಗೆ ನನಗೆ ಗೊತ್ತಿದೆ. ಇಂತಹದೆ ಆಸ್ತಿಗಳು ನನ್ನ ಗಂಡನಾದ 8ನೇ ಪ್ರತಿವಾದಿಯ ಪಾಲಿಗೆ ವಿಭಾಗದ ಮುಖೇನಾ ಬಂದಿರುತ್ತದೆ ಎಂದು ಹೇಳಲು ನನ್ನ ಬಳಿ ದಾಖಲೆ ಇರುವುದಿಲ್ಲ. ಯಾವುದೆ ದಾಖಲೆ ಇಲ್ಲದೆ ಇರುವ ಕಾರಣದಿಂದ ಯಾರ ಯಾರ ಪಾಲಿಗೆ ಯಾವ ಆಸ್ತಿ ಬಂದಿರುತ್ತದೆ ಎಂದು ಹೇಳಲು ಕಷ್ಟವಾಗುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು, ನಮ್ಮ ಪಾಲಿಗೆ ಬಂದಿರುವ ಆಸ್ತಿಯನ್ನು ನಾನು ಹೇಳಲು ಆಗುತ್ತದೆ ಎಂದು ನುಡಿಯುತ್ತಾರೆ.

5. ನನ್ನ ಸ್ವಾಧೀನದಲ್ಲಿ ಅಂದಾಜು 13 ಎಕರೆ ಆಸ್ತಿ ಇದೆ. ಸದರಿ 13 ಎಕರೆ

ಆಸ್ತಿಗಳ ಸರ್ವೆ ನಂಬರನ್ನು ನನಗೆ ಹೇಳಲು ಆಗುತ್ತದೆ. ನಾನು ಹೇಳುವಂತಹ 13 ಎಕರೆ ಆಸ್ತಿಗೆ ಸಂಬಂಧಿಸಿದ ಆರ್ ಟಿ ಸಿ ನನ್ನ ಗಂಡನಾದ 8 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. ಸದರಿ ಆರ್ ಟಿ ಸಿ ನನ್ನ ಗಂಡನಾದ 8 ನೇ ಪ್ರತಿವಾದಿಯ ಹೆಸರಿನಲ್ಲಿ 1973 ರಲ್ಲಿ ಬದಲಾವಣೆ ಆಗಿರುತ್ತದೆ. ಮುದ್ದಯ್ಯರವರು ಮೃತಪಟ್ಟ ನಂತರದಲ್ಲಿ ಆಸ್ತಿ ಪಾಲಾಗಿದ್ದು, ನನ್ನ ಗಂಡನಾದ 8 ನೇ ಪ್ರತಿವಾದಿಯ ಹೆಸರಿನಲ್ಲಿ ಆರ್ ಟಿ ಸಿ ಬದಲಾವಣೆಯಾಗಿರುತ್ತದೆ. ದಿ:27.01.1973 ರಂದು ಕುಟುಂಬದ ಆಸ್ತಿ ವಿಭಾಗ ಆಗಿರುತ್ತದೆ. ಸದರಿ ವಿಭಾಗ ಬಾಯಿ ಮಾತಿನ ಮುಖಾಂತರ ಮುದ್ದಯ್ಯನ 4 ಜನ ಮಕ್ಕಳ ನಡುವೆ ಆಗಿರುತ್ತದೆ. ಊರಿನವರು 4 ಜನ ಮತ್ತು ಮನೆಯವರು 4 ಜನ ಸೇರಿ ನಮ್ಮ ಕುಟುಂಬದ ಆಸ್ತಿಯನ್ನು ಬಾಯಿ ಮಾತಿನ ಮುಖಾಂತರ ವಿಭಾಗ ಮಾಡಿರುತ್ತಾರೆ. ಸದರಿ ಬಾಯಿ ಮಾತಿನ ಮುಖಾಂತರ ಆದಂತಹ ವಿಭಾಗವನ್ನು ಬರವಣಿಗೆಯ ಮುಖಾಂತರ ಕೂಡ ಮಾಡಿರುತ್ತಾರೆ. ಸದರಿ ಬರವಣಿಗೆಯನ್ನು ಮುಕ್ಕಾಟಿ ಕರುಂಬಯ್ಯರವರು ಮಾಡಿರುತ್ತಾರೆ. ಸದರಿ ಬರವಣಿಗೆಗೆ ಮುದ್ದಯ್ಯರವರ ಮಕ್ಕಳು ನಮ್ಮ ಒಪ್ಪಿಗೆ ಇದೆ ಎಂದು ಹೇಳಿ ಸಹಿ ಮಾಡಿರುವುದಿಲ್ಲ. ಈಗ ನಾನು ಹೇಳಿದಂತಹ ಪಾಲುಪಾರಿಕತ್ ಆಧಾರದ ಮೇರೆಗೆ 8 ನೇ ಪ್ರತಿವಾದಿಯ ಹೆಸರಿನಲ್ಲಿ ಆರ್ ಟಿ ಸಿ ಬದಲಾವಣೆ ಆಗಿರುತ್ತದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿ.

6. ಸದರಿ ಪಾಲುಪಾರಿಕತ್ ನ ಆಧಾರದ ಮೇರೆಗೆ 8 ನೇ ಪ್ರತಿವಾದಿಯ ಹೆಸರಿಗೆ ಕಂದಾಯ ದಾಖಲೆಗಳು ಬದಲಾವಣೆ ಆಗಿರುತ್ತದೆ ಎಂದು ಹೇಳಲು ನನ್ನ ಬಳಿ ಕಂದಾಯ ಕಟ್ಟಿದ ಬಗ್ಗೆ ರಶೀದಿಗಳು ಇವೆ. ಸದರಿ ಕಂದಾಯ ರಶೀದಿಗಳನ್ನು ಹೊರತುಪಡಿಸಿ ಬೇರೆ ಯಾವುದೆ ದಾಖಲೆ ನನ್ನ ಬಳಿ ಇರುವುದಿಲ್ಲ ಎಂದರೆ ಸರಿ. ನಾನು ಹೇಳುವಂತಹ ಬಾಯಿ ಮಾತಿನ ಮುಖಾಂತರ ಆದಂತಹ ವಿಭಾಗದ ಪ್ರಕಾರ ಸೋಮಣ್ಣರವರ ಹಿಸ್ಸೆಗೆ 17 ಎಕರೆ ಆಸ್ತಿ ಬಂದಿರುತ್ತದೆ, ಆದರೆ ಸದರಿ ಆಸ್ತಿಯ ಸರ್ವೆ ನಂಬರ್ ಹೇಳಲು ನನಗೆ ಗೊತ್ತಾಗುವುದಿಲ್ಲ. ಅಪ್ಪಯ್ಯರವರ ಹಿಸ್ಸೆಗೆ ಎಷ್ಟು ಆಸ್ತಿ ಬಂದಿರುತ್ತದೆ ಎಂದು ಹೇಳಲು ನನಗೆ ಗೊತ್ತಿಲ್ಲ, ಆದರೆ ಸದರಿಯವರ ಹಿಸ್ಸೆಗೆ ಬಂದಂತಹ ಆಸ್ತಿಯನ್ನು ಸೋಮಣ್ಣ, ನನ್ನ ಗಂಡನಾದ 8 ನೇ ಪ್ರತಿವಾದಿ ಮತ್ತು ವಾದಿಯವರು ವಿಭಾಗ ಮಾಡಿಕೊಂಡಿರುತ್ತಾರೆ.

7. ಅಪ್ಪಯ್ಯರವರ ಹಿಸ್ಸೆಗೆ ಬಂದಂತಹ ಆಸ್ತಿಯನ್ನು ಸೋಮಣ್ಣ, ನನ್ನ ಗಂಡನಾದ 8 ನೇ ಪ್ರತಿವಾದಿ ಮತ್ತು ವಾದಿಯವರು ಯಾವ ಇಸವಿಯಂದು ವಿಭಾಗ

ಮಾಡಿಕೊಂಡಿರುತ್ತಾರೆ ಎಂದು ಹೇಳಲು ನನಗೆ ಗೊತ್ತಿಲ್ಲ. ಅಪ್ಪಯ್ಯರವರ ಹಿಸ್ಸೆಗೆ ಬಂದಂತಹ ಆಸ್ತಿಯನ್ನು ಬರವಣಿಗೆಯ ಮುಖಾಂತರ ವಿಭಾಗ ಆಗಿರುತ್ತದೆ, ಆದರೆ ಸದರಿ ದಾಖಲೆ ನಮ್ಮ ಬಳಿ ಇರುವುದಿಲ್ಲ. ಸದರಿ ದಾಖಲೆಗೆ ವಾದಿ ಸಹಿ ಮಾಡಿರುತ್ತಾರೊ ಇಲ್ಲವೊ ಎಂದು ಹೇಳಲು ನನಗೆ ನೆನಪಿಲ್ಲ. ಸದರಿ ದಾಖಲೆಗೆ ಯಾರೆಲ್ಲ ಸಹಿ ಮಾಡಿರುತ್ತಾರೆ ಎಂದು ಹೇಳಲು ನನಗೆ ನೆನಪಿಲ್ಲ.

8. ಸರ್ವೆ ನಂ.201/2 ರಲ್ಲಿ ಇರುವ ಒಟ್ಟು 2.30 ಎಕರೆ ಆಸ್ತಿಯಲ್ಲಿ 1.15 ಎಕರೆ ಆಸ್ತಿ ನಮಗೆ ಸೇರಿದ ಆಸ್ತಿಯಾಗಿರುತ್ತದೆ, ಸರ್ವೆ ನಂ.202/9 ರಲ್ಲಿರುವಂತಹ 50 ಸೆಂಟ್ ಆಸ್ತಿಯಲ್ಲಿ 30 ಸೆಂಟ್ ನಮಗೆ ಸೇರಿದ ಆಸ್ತಿಯಾಗಿರುತ್ತದೆ ಹಾಗೂ ಉಳಿದ 20 ಸೆಂಟ್ ವಾದಿಗೆ ಸೇರಿದ ಆಸ್ತಿಯಾಗಿರುತ್ತದೆ. ಸರ್ವೆ ನಂ. 195/3 ರಲ್ಲಿರುವ 2.63 ಎಕರೆ ಆಸ್ತಿಯಲ್ಲಿ 2.31 ಎಕರೆ ವಾದಿಗೆ ಸೇರಿದ ಆಸ್ತಿಯಾಗಿರುತ್ತದೆ. ಸರ್ವೆ ನಂ.197/1 ರಲ್ಲಿರುವಂತಹ 50 ಸೆಂಟ್ ಆಸ್ತಿ ಯಾರಿಗೆ ಸೇರಿದ ಆಸ್ತಿ ಎಂದು ಹೇಳಲು ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂ.196/1 ರಲ್ಲಿರುವಂತಹ 4.50 ಎಕರೆ ಆಸ್ತಿ ಯಾರಿಗೆ ಸೇರಿದ ಆಸ್ತಿ ಎಂದು ಹೇಳಲು ನನಗೆ ಗೊತ್ತಿಲ್ಲ. ಸರ್ವೆ ನಂ.211/1 ರಲ್ಲಿರುವಂತಹ ಒಟ್ಟು 38.20 ಎಕರೆ ಆಸ್ತಿಯಲ್ಲಿ 2 ಎಕರೆ ಯಾರಿಗೆ ಸೇರಿದ ಆಸ್ತಿ ಎಂದು ನನಗೆ ಹೇಳಲು ಗೊತ್ತಿಲ್ಲ. ಸರ್ವೆ ನಂ.45/1 ರಲ್ಲಿರುವಂತಹ ಒಟ್ಟು 8.90 ಎಕರೆ ಆಸ್ತಿಯಲ್ಲಿ 4 ಎಕರೆ ಆಸ್ತಿ ವಾದಿಗೆ ಸೇರಿದ ಆಸ್ತಿಯಾಗಿರುತ್ತದೆ. ಸರ್ವೆ ನಂ.164 ರಲ್ಲಿರುವಂತಹ 1.24 ಎಕರೆ ಯಾರಿಗೆ ಸೇರಿದ ಆಸ್ತಿ ಎಂದು ನನಗೆ ಹೇಳಲು ಗೊತ್ತಿಲ್ಲ. ಅದೇ ರೀತಿ ಸರ್ವೆ ನಂ.173 ರಲ್ಲಿರುವಂತಹ 57 ಸೆಂಟ್ ಯಾರಿಗೆ ಸೇರಿದ ಆಸ್ತಿ ಎಂದು ನನಗೆ ಹೇಳಲು ಗೊತ್ತಿಲ್ಲ. ನಾನು ಈಗ ಮೇಲೆ ಹೇಳಿದಂತಹ ಎಲ್ಲಾ ಸರ್ವೆ ನಂಬರ್ ನ ಆರ್ ಟಿ ಸಿ ಯನ್ನು ನೋಡಿರುತ್ತೇನೆ. ಸದರಿ ಆರ್ ಟಿ ಸಿ ಸೋಮಣ್ಣ, ವಾದಿ ಮತ್ತು 8 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. ಸದರಿ ಆರ್ ಟಿ ಸಿ ಗಳು ಸೋಮಣ್ಣ, ವಾದಿ ಮತ್ತು 8 ನೇ ಪ್ರತಿವಾದಿಯ ಜಂಟಿ ಹೆಸರಿನಲ್ಲಿ ಇದೆ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ. ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ.ಇದೆ.

ಸಹಿ/-
(ಶ್ರೀಮತಿ ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.